

ತಂತ್ರಜ್ಞಾನದಿಂದಾಗಿ ಕನ್ನಡ ಪುಸ್ತಕಗಳನ್ನು ರೂಪಿಸುವ ಪ್ರಕ್ರಿಯೆಯಲ್ಲಿ ಬದಲಾವಣೆ ಕಾಣಿಸಿಕೊಂಡಿರುವುದನ್ನೂ ಯಾರೂ ಅಲ್ಲಗಳೆಯುವುದಿಲ್ಲ. ಫೋಟೊಶಾಪ್ ಬಂದ ನಂತರವಂತೂ ಕಲಾವಿದರು ಹಿನ್ನೆಲೆಗೆ ಸರಿದು, ಅವರ ಜಾಗದಲ್ಲಿ ವಿನ್ಯಾಸಕಾರರು ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಿಕೊಂಡಿರುವುದನ್ನು ಪ್ರಕಾಶ್ ಗುರ್ತಿಸುತ್ತಾರೆ.

## ಲಘು ಬರಹಗಳ ಕಾಲ!

''ಕನ್ನಡ ಓದುಗರ ಸಂಖ್ಯೆ ಕುಂಠಿತವಾಗಲಿಕ್ಕೆ ಕನ್ನಡ ಮಾಧ್ಯಮ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿರುವುದು ಪ್ರಮುಖ ಕಾರಣ'' ಎನ್ನುವ ಪ್ರಕಾಶ್ ಕಂಬತ್ತಳ್ಳಿ ಅವರ ಮಾತಿಗೆ ರಮೇಶ್ ಉಡುಪರ ಸಹಮತವೂ ಇದೆ. ಕನ್ನಡ ಓದುಗರ ಸಂಖ್ಯೆ ಕಡಿಮೆಯಾಗುತ್ತಿದೆ ಎನ್ನುವುದರ ಬಗ್ಗೆ ಅವರಿಗೆ ಅನುಮಾನವಿಲ್ಲ. ಓದುಗರ ಜೊತೆಗೆ ಗಂಭೀರ ಓದುಗರೂ ಕಡಿಮೆಯಾಗುತ್ತಿದ್ದಾರೆ ಎನ್ನುವ ಆತಂಕ ಅವರದು.

''ದೀರ್ಘ ಕಾದಂಬರಿಗಳನ್ನು ಓದುವವರು, ಗಂಭೀರ ಸಾಹಿತ್ಯವನ್ನು ಬಯಸುವವರು ಕಡಿಮೆಯಾಗುತ್ತಿದ್ದಾರೆ. ಲಘು ಬರಹಗಳಿಗೀಗ ಹೆಚ್ಚಿನ ಬೇಡಿಕೆ. ಸೆಲ್ಫ್ ಹೆಲ್ಪ್ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳ ಪುಸ್ತಕಗಳಿಗೂ ಬೇಡಿಕೆಯಿದೆ'' ಎಂದು ಇತ್ತೀಚಿನ ಪುಸ್ತಕದ ಒಲವುಗಳ ಬಗ್ಗೆ ಅವರು ಮಾಹಿತಿ ನೀಡುತ್ತಾರೆ.

ಪುಸ್ತಕೋದ್ಯಮದಲ್ಲಿನ ಮೋಡ ಕವಿದ ವಾತಾವರಣಕ್ಕೂ ಕೊಳ್ಳುಬಾಕ ಮನೋಭಾವಕ್ಕೂ ಉಡುಪರು ಕಲ್ಪಿಸುವ ಸಂಬಂಧ ಕುತೂಹಲಕರವಾಗಿದೆ. ''ಆನ್‌ಲೈನ್ ತುಂಬ ಡಿಸ್ಕೌಂಟ್ ಮಾರಾಟದ ಭರಾಟೆ. ಬೇಕೋ ಬೇಡವೋ ಜನ ಖರೀದಿಸುತ್ತಾರೆ. ಈ ಮನೋಭಾವ ಪುಸ್ತಕಗಳಿಗೆ ಅನ್ವಯಿಸುವುದಿಲ್ಲ. ಆಹಾರ, ಔಷಧಿಯಂತೆ ಪುಸ್ತಕ ಅಗತ್ಯ ಎಂದು ಜನರಿಗೆ ಅನ್ನಿಸುವುದಿಲ್ಲ. ಇತರ ಸರಕುಗಳಿಗೆ ನೀಡುವ ಹೆಚ್ಚಿನ ಡಿಸ್ಕೌಂಟ್ ಅನ್ನು ಪುಸ್ತಕಗಳಿಗೆ ಕೊಡುವುದೂ ಸಾಧ್ಯವಿಲ್ಲ'' ಎನ್ನುವುದು ಉಡುಪರ ಅಭಿಪ್ರಾಯ.

## ಓದುಗರನ್ನು ರೂಪಿಸುವ ಸವಾಲು

''ಖರೀದಿಸುವ ಪುಸ್ತಕಗಳ ಸಂಖ್ಯೆಯನ್ನು 300ರಿಂದ 500ಕ್ಕೆ ಹೆಚ್ಚಿಸುವ ಚಿಂತನೆ ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಮುಂದಿದೆ. ಪುಸ್ತಕಗಳಿಗೆ ಒಳ್ಳೆಯ ಬೆಲೆಯೂ ದೊರೆಯುತ್ತಿದೆ. ಗ್ರಂಥಾಲಯ ಖರೀದಿಯ ಒತ್ತಾಸೆಯಲ್ಲಿ ಒಂದಿಷ್ಟು ಪ್ರಕಾಶಕರು ಉತ್ಸಾಹದಿಂದ ಪ್ರಕಟಣೆಯಲ್ಲಿ ತೊಡಗಿಕೊಂಡಿರಬಹುದೇ ಹೊರತು, ಓದುಗರನ್ನು ಗಮನದಲ್ಲಿಟ್ಟುಕೊಂಡು ಪುಸ್ತಕ ಪ್ರಕಟಿಸುವವರಲ್ಲಿ ಉತ್ಸಾಹ ಕಾಣಿಸುತ್ತಿಲ್ಲ'' ಎನ್ನುತ್ತಾರೆ.

''ವರ್ಷಕ್ಕೆ ಒಂದಾದರೂ ಪುಸ್ತಕ ಕೊಳ್ಳುವವರ ಸಂಖ್ಯೆ ರಾಜ್ಯದಲ್ಲಿ ಶೇ. 5ರಷ್ಟೂ ಇಲ್ಲ'' ಎನ್ನುವ ಅವರು, ಪುಸ್ತಕ ಮಳಿಗೆಗಳಲ್ಲಿ ವರ್ಷದಿಂದ ವರ್ಷಕ್ಕೆ ವ್ಯಾಪಾರ ಕುಸಿಯುತ್ತಿದೆ ಎನ್ನುತ್ತಾರೆ. ಇದರ ಇನ್ನೊಂದು ತುದಿಯಲ್ಲಿ 'ನವಕರ್ನಾಟಕ'ದ ಆನ್‌ಲೈನ್ ಮಳಿಗೆಯಲ್ಲಿ ವ್ಯಾಪಾರ ಕೊಂಚ ಚುರುಕಾಗಿರುವುದನ್ನೂ ಒಪ್ಪಿಕೊಳ್ಳುತ್ತಾರೆ.

ಸಾಮಾಜಿಕ ಜಾಲತಾಣಗಳಿಂದ ಪುಸ್ತಕಗಳಿಗೆ ಹೊಸ ಓದುಗ ವರ್ಗವೊಂದು ದೊರೆಯುತ್ತಿದೆ ಎನ್ನುವುದನ್ನೂ ಅವರು ಒಪ್ಪುವುದಿಲ್ಲ. ''ಸೋಷಿಯಲ್ ಮೀಡಿಯಾ ತನ್ನ ಬಳಕೆದಾರರಲ್ಲಿ ಓದುವ ಹುಚ್ಚನ್ನು ಬೆಳೆಸಬಹುದು. ಆದರೆ, ಈ ಓದು ಅಂತರ್ಜಾಲಕ್ಕೆ ಸೀಮಿತ. ಆ ಓದುಗರು ಪುಸ್ತಕಗಳ ಓದುಗರಾಗಿ ಬದಲಾಗುತ್ತಿಲ್ಲ'' ಎನ್ನುವುದು ಅವರ ಅನುಭವ.

ಇ–ಪುಸ್ತಕಗಳು ಕೂಡ ಕನ್ನಡದಲ್ಲಿ ಜನಪ್ರಿಯವಲ್ಲ. ನವಕರ್ನಾಟಕ ಪ್ರಕಾಶನದ್ದೇ ಸುಮಾರು 700 ಇ–ಪುಸ್ತಕಗಳು ಲಭ್ಯವಿವೆಯಂತೆ. ಬೇಡಿಕೆ ಅಷ್ಟಕ್ಕಷ್ಟೇ ಎನ್ನುತ್ತಾರೆ ಉಡುಪರು.

ಹಾಗಾದರೆ ಕನ್ನಡ ಪುಸ್ತಕೋದ್ಯಮದ ನಾಳೆಗಳ ಗತಿಯೇನು? ''ಗೊತ್ತಿಲ್ಲ. ಆನ್‌ಲೈನ್ ಒಪ್ಪಂದಗಳ ಮೂಲಕ ಕನ್ನಡ ಪುಸ್ತಕಗಳಿಗೆ ಬೇಡಿಕೆ ಕಂಡುಕೊಳ್ಳಲು ಸಾಧ್ಯವಾಗುವುದೇನೊ ನೋಡಬೇಕು'' ಎಂದು ಉಡುಪರು ಪ್ರಶ್ನಾರ್ಥಕ ಧ್ವನಿಯಲ್ಲಿಯೇ ಹೇಳುತ್ತಾರೆ. ಈ ಮಾತು ಕೂಡ, ಪುಸ್ತಕೋದ್ಯಮದ ಬೆಳವಣಿಗೆಯ ಸಾಧ್ಯತೆಗಳನ್ನು ಅಂತರ್ಜಾಲದಲ್ಲಿ ಹುಡುಕಬೇಕು ಎನ್ನುವ ನಂಬಿಕೆಗೆ ಪೂರಕವಾಗಿಯೇ ಇದೆ. ಇದರ ಜೊತೆಗೆ, ಗ್ರಂಥಾಲಯ ಇಲಾಖೆಯನ್ನು ಗುರಿಯಾಗಿಟ್ಟುಕೊಂಡಿರುವ ಪುಸ್ತಕೋದ್ಯಮ ಓದುಗಮುಖಿ ಉದ್ಯಮವಾಗಿ ತನ್ನನ್ನು ರೂಪಿಸಿಕೊಳ್ಳದೆ ಹೋದರೆ ಇನ್ನಷ್ಟು ಜಡಗೊಳ್ಳುವುದು ನಿಶ್ಚಿತ.

ಬೆಂಗಳೂರು ಕೇಂದ್ರಿತ ಪುಸ್ತಕನೀತಿಯ ಬಗ್ಗೆ ಅಭಿರುಚಿ ಗಣೇಶ್‌ರಿಗೂ ಅಸಮಾಧಾನವಿದೆ. ''ನಾವು ಪ್ರಕಟಿಸುವ ಪುಸ್ತಕಗಳನ್ನೇ ವಿಶ್ವವಿದ್ಯಾಲಯಗಳೂ ಪ್ರಾಧಿಕಾರಗಳೂ ಪ್ರಕಟಿಸುತ್ತಾರೆ. ಅಂದರೆ, ನಮ್ಮೊಂದಿಗೆ ಅವರು ಸ್ಪರ್ಧಿಸುತ್ತಿದ್ದಾರೆಯೆ'' ಎನ್ನುವುದು ಅವರ ಪ್ರಶ್ನೆ. ಪುಸ್ತಕಗಳನ್ನು ಪ್ರಕಟಿಸಿ, ಮಾರಾಟ ಜಾಲದ ಬಗ್ಗೆ ನಿರಾಸಕ್ತಿ ಹೊಂದಿರುವ ಸರ್ಕಾರಿ ಸಂಸ್ಥೆಗಳ ಬಗ್ಗೆ ಅವರಿಗೆ ವಿಷಾದ.

## ಪುಸ್ತಕ ಚೈತ್ರಕಾಲ!

ಪ್ರಕಾಶಕ, ಮಾರಾಟಗಾರರ ನಿರಾಶೆಯ ನಡುವೆಯೂ ಕನ್ನಡ ಪುಸ್ತಕೋದ್ಯಮ ಬೆಳವಣಿಗೆ ಹೊಂದುತ್ತಿರುವುದು ಸುಳ್ಳೇನಲ್ಲ. ಜನಪ್ರಿಯ ಕಾದಂಬರಿಕಾರರನ್ನು ಹೊರತುಪಡಿಸಿದರೆ, ಅತ್ಯುತ್ತಮ ಬರಹಗಾರರ ಕೃತಿಗಳ ಸಾವಿರ ಪ್ರತಿಗಳು ಖರ್ಚಾಗಲು ವರ್ಷಗಳ ಕಾಲ ಕಾಯಬೇಕಾದ ಕಾಲವಿತ್ತು. ಈಗ ಹೊಸ ಬರಹಗಾರ ಕೂಡ ಸಾಮಾಜಿಕ ಜಾಲತಾಣದಲ್ಲಿನ ತನ್ನ ಸ್ನೇಹವಲಯವನ್ನು ಬಳಸಿಕೊಂಡು ತನ್ನ ಪುಸ್ತಕಗಳಿಗೆ ಮಾರುಕಟ್ಟೆ ಕಂಡುಕೊಳ್ಳಲಿಕ್ಕೆ ಸಾಧ್ಯವಿದೆ. ಈ ನಿಟ್ಟಿನಲ್ಲಿ, ಫೇಸ್‌ಬುಕ್ ಬರಹಗಳು ಪುಸ್ತಕರೂಪದಲ್ಲಿ ಪ್ರಕಟಗೊಳ್ಳುತ್ತಿರುವುದನ್ನು ಗಮನಿಸಬೇಕು.

ತಂತ್ರಜ್ಞಾನದ ದೆಸೆಯಿಂದಾಗಿ ಕನ್ನಡ ಪುಸ್ತಕೋದ್ಯಮ ಅನಿರೀಕ್ಷಿತವಾಗಿ ತಾರುಣ್ಯಕ್ಕೆ ಹೊರಳಿಕೊಂಡಂತಿದೆ. ಸಾಂಪ್ರದಾಯಿಕ ಪುಸ್ತಕ ಬಿಡುಗಡೆ ಕಾರ್ಯಕ್ರಮಗಳಲ್ಲಿ ಹಿರಿಯ ನಾಗರಿಕರ ಸಂಖ್ಯೆ ಹೆಚ್ಚಾಗಿರಬಹುದು. ಅನೇಕ ಯುವ ಬರಹಗಾರರು ಗ್ರಂಥಾಲಯಗಳ ಹಂಗಿಗೆ ಬೀಳದೆ ಓದುಗರನ್ನೇ ನೆಚ್ಚಿಕೊಂಡಿದ್ದಾರೆ. ಪುಸ್ತಕ ಪ್ರಕಟಣೆಯ ಗುಣಮಟ್ಟ ಕೂಡ ಉತ್ತಮವಾಗಿದೆ. ಬೆಂಗಳೂರಿನಾಚೆಯ ಹಲವು ಉತ್ಸಾಹಿಗಳು ಪ್ರಕಟಣೆಯನ್ನು ಗಂಭೀರವಾಗಿ ತೆಗೆದುಕೊಂಡಿದ್ದಾರೆ. ಬಳ್ಳಾರಿ ಸೀಮೆಯ 'ಪಲ್ಲವ' ಪ್ರಕಾಶನ ಸಂಸ್ಥೆಯ ವೆಂಕಟೇಶ್ ಪ್ರಕಟಿಸುತ್ತಿರುವ ಗುಣಮಟ್ಟದ ಪುಸ್ತಕಗಳು ಯಾವ ಭಾಷೆಯ ಪುಸ್ತಕಗಳಿಗೂ ಕಡಿಮೆಯಿಲ್ಲ ಎನ್ನುವಂತಿವೆ.



ಎಂ.ಎ.ಸುಬ್ರಹ್ಮಣ್ಯ

ಸಾಂಪ್ರದಾಯಿಕ ಪುಸ್ತಕ ಬಿಡುಗಡೆ ಕಾರ್ಯಕ್ರಮಗಳಲ್ಲಿ ಹಿರಿಯ ನಾಗರಿಕರೇ ಹೆಚ್ಚಿನ ಸಂಖ್ಯೆಯಲ್ಲಿ ಕಾಣಿಸಬಹುದು. ಆದರೆ, ಸಾಮಾಜಿಕ ಜಾಲತಾಣಗಳಲ್ಲಿನ ಸಾಹಿತ್ಯಿಕ ಚಟುವಟಿಕೆಗಳಲ್ಲಿ ಯುವ ಜನರ ಕಲರವವೇ ಹೆಚ್ಚು. ಈ ಯುವೋತ್ಸಾಹವನ್ನು ಪುಸ್ತಕೋದ್ಯಮ ಸರಿಯಾಗಿ ಬಳಸಿಕೊಂಡರೆ ಪುಸ್ತಕಪೇಟೆ ತನ್ನ ಕವಲುಗಳನ್ನು ಹೆಚ್ಚಿಸಿಕೊಳ್ಳುವ ಸಾಧ್ಯತೆಯಂತೂ ಇದೆ.